**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.1145/2025** **PW:1**

ದಿಃ **19.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಮದ್ಯಾಹ್ನ 2.45 ಕ್ಕೆ ನಾನು, ಚಾಸಾಃ 4,5 ಮತ್ತು 8 ಎಲ್ಲರೂ ಸೇರಿ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿರುವ ಸಾರ್ವಜನಿಕ ಸ್ಥಳವಾದ ಚೋಟಾ ದಾಬಾದ ಬಳಿ ಹೋದೆವು. ಪಂಚರ ಜೊತೆಗೆ ಹೋದಾಗ ಮದ್ಯಾಹ್ನ 3 ಗಂಟೆ ಆಗಿತ್ತು. ಚಾಸಾಃ 2 ಮತ್ತು 3 ಪಂಚರು ಬಂದಿದ್ದರು. ಎಲ್ಲರೂ ಕೂಡಿ ನೂರು ಮಿಟರ ಅಂತರದಲ್ಲಿ ವಾಚ್ ಮಾಡುತ್ತಾ ನಿಂತೆವು. ಅಲ್ಲಿ ಆರೋಪಿ ಪ್ಲಾಸ್ಟಿಕ ಚೀಲದಲ್ಲಿ ಏನೊ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಅಂತಾ ಕಂಡು ಬಂತು. ನಂತರ ಚಾಸಾಃ 8 ರವರ ಅವನನ್ನು ಹಿಡಿದು ಅದರಲ್ಲಿ ಏನಿದೆ ಅಂತಾ ಪ್ರಶ್ನೆ ಮಾಡಿ ಕೇಳಿದರು. ಆಗ ಆರೋಪಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟಗಳು ಇರುವುದಾಗಿ ತಿಳಿಸಿದ. ಆತನನ್ನು ಹಿಡಿದಾಗ ಮದ್ಯಾಹ್ನ 3.20 ಆಗಿತ್ತು. ಆರೋಪಿತನಿಗೆ ಮದ್ಯ ಇರುವ ಬಗ್ಗೆ ರಶೀದಿ ಕೇಳಲಾಗಿ ಆತ ಇದಕ್ಕೆ ಯಾವದೇ ರಶೀದಿ ಇಲ್ಲ. ತಾನು ಕುಡಿಯುವ ಚಟ ಹೊಂದಿದ್ದು ಸದರಿ ಮದ್ಯವನ್ನು ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡಿದ್ದೇನೆ ಅಂತಾ ಹೇಳಿದ. ಆರೋಪಿತನ ಹೆಸರು ಕೇಳಲಾಗಿ ಆತನ ಹೆಸರು ರಮೇಶ ಮಲ್ಲಪ್ಪ ಠಾಣೆದ ಅಂತಾ ಹೇಳಿದ. ಆಗ ಆರೋಪಿತರ ಬಳಿ ಇದ್ದ ಚೀಲವನ್ನು ಪರಿಶೀಲನೆ ಮಾಡಿ ನೋಡಲಾಗಿ ಅದರಲ್ಲಿ 90 ಎಮ್ ಎಲ್ ಅಳತೆಯ 28 ಓರಿಜಿನಲ್ ಚಾಯ್ಸ ಕಂಪನಿಯ ಟೆಟ್ರಾ ಪ್ಯಾಕಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ತೋರಿಸಿ, ರಾಸಾಯನಿಕ ಪರೀಕ್ಷೆ ಸಲುವಾಗಿ ಒಂದು ಬಿಳಿ ಬಣ್ಣದ ಬಟ್ಟೆ ಚೀಲದಲ್ಲಿ PI APMC Navanagar PS ಎಂಬ ಇಂಗ್ಲಿಷ ಮೊಹರಿನ ಅರಗಿನೊಂದಿಗೆ ಸೀಲ್ ಮಾಡಿದೆವು. ಆ ಕಾಲಕ್ಕೆ ನಮ್ಮ ಠಾಣೆಯ ಪಿ ಎಸ್ ಐ ಹಾಗೂ ಅಪರಾಧಿ ವಿಬಾಗದ ಸಿಬ್ಬಂದಿ ಇವರು ಹಾಗೂ ಪಂಚರ ಸಹಿ ಪಂಚನಾಮೆಯ

ದಾಖಲಾತಿಗೆ ಇದೆ. ಪಂಚನಾಮೆಯ ಸಮಯ ಮದ್ಯಾಹ್ನ 3.25 ರಿಂದ 4.30 ರವರೆಗೆ ಮಾಡಿದೆ. ಸ್ಥಳದಲ್ಲಿಯೆ ನಮ್ಮ ಠಾಣಾ ಸಿಬ್ಬಂದಿಯಾಂ ಚಾಸಾಃ 4 ಇವರು ಪಂಚನಾಮೆಯನ್ನು ಟೈಪ್ ಮಾಡಿದರು. ಇನ್ನೊಬ್ಬ ಸಿಬ್ಬಂದಿಯಾದ ಚಾಸಾಃ 5 ರವರು ತಮ್ಮ ಮೊಬೈಲನಿಂದ ಪೊಟೊ ತೆಗೆದು ವಿಡಿಯೊ ಮಾಡಿದರು. ಸಾಯಂಕಾಲ 4.45 ಗಂಟೆಗೆ ಆರೋಪಿ ಹಾಗೂ ಮುದ್ದೆಮಾಲುಗಳನ್ನು ಪೊಲಿಸ್ ಠಾಣೆಗೆ ತೆಗೆದುಕೊಂಡು ಬಂದೆವು. ಈ ಬಗ್ಗೆ ಪುನಃ ಹೇಳಿಕೆಯನ್ನು ಠಾಣೆಯಲ್ಲಿ ಹೇಳಿದ್ದೇನೆ. ನನಗೆ ತೊರಿದಂತೆ ದಾಳಿ ಪಂಚನಾಮೆಯಲ್ಲಿ ನನ್ನ ಸಹಿ ಇದ್ದು ದಾಳಿ ಪಂಚನಾಮೆಯ ಪ್ರತಿಯನ್ನು ನಿಪಿ.2 ಎಂದು, ನನ್ನ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ನನಗೆ ತೊರಿದಂತೆ ಒಂದು ಪೊಟೊದಲ್ಲಿ ನಾನು ಮತ್ತು ಪಂಚರು ಹಾಗೂ ಇತರೆ ಸಿಬ್ಬಂದಿಗಳು ಇದ್ದು ಇನ್ನೊಂದು ಪೊಟೊದಲ್ಲಿ ಮುದ್ದೆಮಾಲುಗಳು ಇದ್ದು ಈ ಪೊಟೊಗಳನ್ನು ನೋಡಿ ಗುರುತಿಸುತ್ತಿದ್ದು ಇವನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲಿನ ಟೆಟ್ರಾಪೌಚಗಳನ್ನು ನೋಡಿ ಗುರುತಿಸುತ್ತಿದ್ದು ಅವುಗಳನ್ನು ಒಟ್ಟಾರೆಯಾಗಿ ಮು ಮಾ 1 ಎಂದು, ಈ ಟೆಟ್ರಾಪೌಚಗಳಿದ್ದ ಪ್ಲಾಸ್ಟಿಕ ಚೀಲವನ್ನು ಮು ಮಾ 2 ಎಂದು ಗುರುತಿಸಲಾಯಿತು. ಆ ದಿವಸ ನಾವು ಹಿಡಿದ ಆರೋಪಿ ಈ ದಿವಸ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸುತ್ತೇನೆ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಚ್ ಬಿ ಎಚ್ ವಕೀಲರಿಂದಃ**

ಆ ದಿವಸ ಮದ್ಯಾಹ್ನ 2 ಗಂಟೆಗೆ ದೂರು ಕೊಟ್ಟು ಪ್ರಥಮ ವರ್ತಮಾನ ವರದಿ ಹಾಕಿಸುವ ಸಲುವಾಗಿ ನಾನು ಠಾಣೆಯಲ್ಲೆ ಇದ್ದೆ. ನನಗೆ ಬಾತ್ಮಿ ಮದ್ಯಾಹ್ನ 1 ಗಂಟೆ ಸಮಾರಿಗೆ ಬಂದಿದೆ. ನಾನು ದೂರನ್ನು ಹೇಳಿ ಟೈಪ್ ಮಾಡಿಸಿದ್ದೇನೆ. ದೂರಿನಲ್ಲಿ ಮತ್ತು ನನ್ನ ಮುಖ್ಯವಿಚಾರಣೆಯಲ್ಲಿ ಯಾರಿಗೆ ಹೇಳಿ ಟೈಪ್ ಮಾಡಿಸಿದೆ ಅಂತಾ ಬರೆದಿಲ್ಲ ಎಂದರೆ ಸರಿ. ದೂರನ್ನು ಟೈಪ್ ಮಾಡಿಸಲು 10 ರಿಂದ 15 ನಿಮಿಷ ಆಯಿತು. ನಾನು ದೂರನ್ನು ಟೈಪ್ ಮಾಡಿಸಿಲ್ಲ ಮತ್ತು ದೂರನ್ನು ಕೊಟ್ಟಿಲ್ಲ ಹಾಗೂ ನಮ್ಮ ಠಾಣಾಧಿಕಾರಿ ಟೈಪ್ ಮಾಡಿಸಿ ನೀಡಿದ ದೂರಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ವಾಹನಗಳ ನೊಂದಣಿ ಸಂಖ್ಯೆಗಳನ್ನು ಬರೆದಿಲ್ಲ ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋದ

ವಾಹನಗಳ ಸಂಖ್ಯೆಯನ್ನು ಸಹ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲೆ ಪಂಚರನ್ನು ಕರೇಸಿ ಅವರಿಗೆ ಘಟನೆಯ ಬಗ್ಗೆ ಅಲ್ಲೆ ತಿಳಿಸಿದೆವು. ಇಬ್ಬರು ಪಂಚರು ಘಟನಾ ಸ್ಥಳದ ಸ್ಥಳಿಕರಲ್ಲ ಎಂದರೆ ಸರಿ. 5 ರಿಂದ 10 ನಿಮಿಷ ಅಲ್ಲಿ ನಾವು ವಾಚ್ ಮಾಡಿದೆವು. ಈ 5 ರಿಂದ 10 ನಿಮಿಷ ವಾಚ್ ಮಾಡಿದ ವಿಚಾರವನ್ನು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ನೋಡಿದಾಗ ಆರೋಪಿತನ ಬಳಿ ಯಾವ ವ್ಯಕ್ತಿಗಳು ಬರುತ್ತಿರಲಿಲ್ಲ. ಆರೋಪಿತನಿಗೆ ಘೇರಾವು ಮಾಡಿ ಹಿಡಿದೆವು ಮತ್ತು ಆತನ ಬಳಿ ಮದ್ಯದ ಟೆಟ್ರಾಪ್ಯಾಕೆಟಗಳು ಸಿಕ್ಕವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಟೆಟ್ರಾಪೌಚಗಳು ನಮ್ಮ ಠಾಣೆಪಿಯಲ್ಲಿ ಇದ್ದ ಬೇರೆ ಪ್ರಕರಣಗಳ ಮಾಲುಗಳಾಗಿದ್ದು ಆರೋಪಿಯ ವಿರುದ್ದ ಈ ಸುಳ್ಳು ಪ್ರಕರಣದಲ್ಲಿ ಮುದ್ದೆಮಾಲುಗಳು ಅಂತಾ ತೊರಿಸಿದ್ದೇವೆ ಎಂದರೆ ಸರಿಯಲ್ಲ. ಈ ಮುದ್ದೆಮಾಲುಗಳಿಗೂ ಮತ್ತು ಆರೋಪಿತನಿಗೂ ಯಾವದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಪಿ.2 ದಾಳಿ ಮಹಜರನ ಪ್ರಿಂಟನ್ನು ಠಾಣೆಯಲ್ಲಿ ತೆಗೆದೆವು. ಠಾಣೆಯಲ್ಲಿ ಪ್ರಿಂಟ್ ತೆಗೆದೆವು ಎನ್ನುವ ಬಗ್ಗೆ ನಿಪಿ.2 ರಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿ.2 ದಾಳಿ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿಯೆ ಇಲ್ಲ ಹಾಗೂ ಠಾಣೆಯಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.3 ಮತ್ತು 4 ಪೊಟೊಗಳಲ್ಲಿ ಸಮಯ, ಸ್ಥಳ ಮತ್ತು ದಿನಾಂಕ ನಮೂದಾಗಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿನಿಗೂ ಮತ್ತು ಈ ಪ್ರಕರಣಕ್ಕೂ ಹಾಗೂ ಮುದ್ದೆಮಾಲಿಗೂ ಏನು ಸಂಬಂದ ಇರದಿದ್ದರೂ ಸಹ ನಾನು ಸುಳ್ಳು ಫಿರ್ಯಾದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.